ಕರ್ನಾಟಕ ಸರ್ಕಾರ

(ತೋಟಗಾರಿಕೆ ಇಲಾಖೆ)

ಸಂ:ತೋಇ:ಜೈಕೇ:ತೋಉನಿ:ಅಂಕೃ:ಸತೋಅ1:01:2024-25

ತೋಟಗಾರಿಕೆ ನಿರ್ದೇಶನಾಲಯ

ಜೈವಿಕ ಕೇಂದ್ರ ಹುಳಿಮಾವು,

ಬೆಂಗಳೂರು, ದಿನಾಂಕ:20.04.2024

**ಪ್ರಕಟಣೆ**

ವಿಷಯ: ಅಂಗಾಂಶ ಕೃಷಿ ಸಸಿಗಳ ಗಡಸುಗೊಳಿಸುವಿಕೆ ಅಗತ್ಯವಿರುವ ಮಣ್ಣು, ಮರಳು ಮತ್ತು ಗೊಬ್ಬರದ ಮಿಶ್ರಣ ಮಾಡಿ ಪಾಲಿಬ್ಯಾಗ್ನಲ್ಲಿ ತುಂಬುವ ಉಪಕರಣವನ್ನು ನಿಯಮಾನುಸಾರ ಖರೀದಿಸಲು ಪ್ರಕಟಣೆ ಹೊರಡಿಸುವ ಕುರಿತು

*****

ಜೈವಿಕ ಕೇಂದ್ರ, ಹುಳಿಮಾವು ಇಲ್ಲಿನ ಅಂಗಾಂಶ ಕೃಷಿ ಪ್ರಯೋಗಶಾಲೆಯಿಂದ ಹೊರ ಬರುವಂತಹ ಅಂಗಾಂಶ ಕೃಷಿ ಸಸಿಗಳ ಪ್ರಾಥಮಿಕ ಮತ್ತು ದ್ವಿತೀಯ ಹಂತದ ಗಡಸುಗೊಳಿಸುವಿಕೆಗೆ ಅಗತ್ಯವಿರುವ ಮಣ್ಣು, ಮರಳು ಮತ್ತು ಗೊಬ್ಬರಗಳನ್ನು ಚೆನ್ನಾಗಿ ಮಿಶ್ರಣ ಮಾಡಿ 4"x6" ಪಾಲಿಕವರ್‌ಗಳಲ್ಲಿ ತುಂಬಿಸಬೇಕಾಗಿರುತ್ತದೆ. ಈ ಕೆಲಸಕ್ಕೆ ಸಾಕಷ್ಟು ಸಮಯ ಬೇಕಾಗುತ್ತದೆ. ಬಾಳೆ ಸಸಿಗಳ ನಾಟಿಯು ಋತುಮಾನ ಆಧರಿತ ಬೆಳೆಯಾಗಿದ್ದು, ಸಮಯಕ್ಕೆ ಸರಿಯಾಗಿ ಗಡಸುಗೊಳಿಸಿರುವ ಸಸಿಗಳನ್ನು ಮಾರಾಟ ಮಾಡಬೇಕಾಗಿರುತ್ತದೆ. ಬೇಡಿಕೆ ಆಧರಿತ ಸರಬರಾಜು ಮಾಡಬೇಕಾದುದರಿಂದ ಹೆಚ್ಚಿನ ಪ್ರಮಾಣದಲ್ಲಿ ಪಾಲಿಬ್ಯಾಗ್ ತುಂಬಬೇಕಾದುದರಿಂದ "motor operated soil, sand and manure mixing and polybag filling machine" ಅನ್ನು ನಿಯಮಾನುಸಾರ ಖರೀದಿಸಲು ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಅದರಂತೆ, ಸದರಿ ಉಪಕರಣಗಳನ್ನು ನಿಗಧಿತ ತಾಂತ್ರಿಕ ವೈಶಿಷ್ಟ್ಯತೆ ಪ್ರಕಾರ ಸರಬರಾಜು ಅಳವಡಿಕೆಗಾಗಿ ಅರ್ಹ ಸಂಸ್ಥೆಗಳಿಂದ ದರಪಟ್ಟಿಯನ್ನು ಕರೆಯಲಾಗಿದೆ. ಆಸಕ್ತಿಯುಳ್ಳವರು ಸದರಿ ಉಪಕರಣವನ್ನು ಸರಬರಾಜು ಮಾಡಲು ತಗಲುವ ವೆಚ್ಚಕ್ಕೆ (GST) ಸೇರಿದಂತೆ, ಮೊಹರು ಮಾಡಿದ ಲಕೋಟೆಗಳಲ್ಲಿ ತಮ್ಮ ದರಪಟ್ಟಿಗಳನ್ನು ದಿನಾಂಕ:04.05.2024 ರ ಮಧ್ಯಾಹ್ನ 4.00 ಗಂಟೆಯ ಒಳಗಾಗಿ ಸಲ್ಲಿಸುವುದು. ಸದರಿ ಉಪಕರಣಗಳನ್ನು ನಿಗಧಿತ ತಾಂತ್ರಿಕ ವೈಶಿಷ್ಟ್ಯತೆ ಪ್ರಕಾರ ಸರಬರಾಜು, ಅಳವಡಿಕೆ ಮತ್ತು ಪ್ರಾಯೋಗಿಕ ಚಾಲನೆಯನ್ನು ತೃಪ್ತಿಕರವಾಗಿ ನಿರ್ವಹಿಸಿದ ನಂತರವಷ್ಟೇ ಉಪಕರಣಗಳ ಬಾಬ್ತನ್ನು ಪಾವತಿ ಪಡೆಯಲು ಒಪ್ಪಿರುವ ಬಗ್ಗೆ ರೂ.200.00 ರ ಛಾಪಾ ಕಾಗದದಲ್ಲಿ ಒಪ್ಪಿಗೆ ಪತ್ರವನ್ನು ಸಲ್ಲಿಸುವುದು. ದರಪಟ್ಟಿಗಳನ್ನು ನಿಯಮಾನುಸಾರ ಪರಿಶೀಲಿಸಲಾಗುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ಅಧಿಕಾರಿಗಳನ್ನು ಸಂಪರ್ಕಿಸಬಹುದು. ದರಪಟ್ಟಿಗಳನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕು ಕೆಳ ಸಹಿ ಮಾಡಿರುವ ಅಧಿಕಾರಿಗಳಿಗಿರುತ್ತದೆ.

ತಾಂತ್ರಿಕ ವೈಶಿಷ್ಟ್ಯತೆಗಳು ಈ ಕೆಳಗಿನಂತಿವೆ

**Technical Specification of motor operated soil, sand and manure mixing and polybag filling machine**

| Sl.No | Particulars |
|---|---|
| 1 | Motor operated soil and manure mixing and different sizes of poly bag filling machine (converyor cups) machine fitted with wheels for easy transportation<br>Dimension : 10x4x6 ft<br>Output capacity : 1200 KG/Per HR<br>Power : 3 Hp /5 KW<br>Sieving : 10mm |

ತೋಟಗಾರಿಕೆ ಉಪ ನಿರ್ದೇಶಕರು
(ಅಂಗಾಂಶ ಕೃಷಿ)

ಪ್ರತಿಯನ್ನು :

1. ತೋಟಗಾರಿಕೆ ಜಂಟಿ ನಿರ್ದೇಶಕರು (ಇ-ಆಡಳಿತ) ಲಾಲ್‌ಬಾಗ್, ಬೆಂಗಳೂರು ರವರಿಗೆ ಗುರುತಿಸುತ್ತಾ, ಪ್ರಕಟಣೆಯನ್ನು ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಈ ಮೂಲಕ ಕೋರಿದೆ.
2. ತೋಟಗಾರಿಕೆ ಜಂಟಿ ನಿರ್ದೇಶಕರು (ಬಯೋಟೆಕ್ನಾಲಜಿ), ಜೈವಿಕ ಕೇಂದ್ರ, ಹುಳಿಮಾವು, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
3. ತೋಟಗಾರಿಕೆ ಉಪ ನಿರ್ದೇಶಕರು (ತೋ.ಮಾ.ಕೇ) ಲಾಲ್‌ಬಾಗ್, ಬೆಂಗಳೂರು ರವರ ಪ್ರಕಟಣಾ ಫಲಕಕ್ಕೆ
4. ಜೈವಿಕ ಕೇಂದ್ರ ಪ್ರಕಟಣಾ ಫಲಕಕ್ಕೆ
5. ಕಛೇರಿ ಪ್ರತಿ